ನನಗೆ ವಿಶ್ವಾಸವಿತ್ತು. ನಾನು ತಪ್ಪು ಮಾಡುತ್ತಿಲ್ಲ. ನನಗೆ ಮೋಸವಾಗಿದೆ. ಅದನ್ನು ಸರಿಪಡಿಸಲು ಈ ದೇಶದ ಕಾನೂನಿಗೆ ಶಕ್ತಿ ಇಲ್ಲ. ಅದಕ್ಕೆಂದೇ ನಾನು ಪ್ರತಿ ಸರ್ಕಾರದ ಮೊರೆ ಹೋಗುತ್ತಿದ್ದೇನೆ. ಇದು ಮಾಡು ಇಲ್ಲವೆ ಮಡಿ ಪ್ರಯತ್ನ ನನಗೆ.

ಅವಳು ಹಾಸಿಗೆಯಲ್ಲೇ ಮಲಗಿ ಯೋಚಿಸಿದಳು. ರಾತ್ರಿ ಏಳು ಗಂಟೆಗೆ ಹೊಸ ಸಿಮ್‌ನಿಂದ ಕರೆ ಮಾಡುತ್ತೇನೆ. ಹಾಗೇ ಕಣ್ಣು ಮುಚ್ಚಿಕೊಂಡಳು. ಅವಳಿಗೀಗ ವಿಶ್ರಾಂತಿ. ಯಾರೂ ಡಿಸ್ಟರ್ಬ್ ಮಾಡುವಂತಿಲ್ಲ. ಅಕಸ್ಮಾತ್ ಯಾರಾದರೂ ಸಣ್ಣದೋ ಪುಟ್ಟದೋ ಪಾತ್ರವಿದೆ ಬನ್ನಿ ಎಂದು ಕರೆದರೆ, ಅದನ್ನು ನೋಡಿಕೊಳ್ಳಲು ರಿಸೆಪ್ಷನಿಸ್ಟ್ ಇದ್ದಾಳೆ. ಯಾರಾದರೂ ಫೋನ್ ಮಾಡಿದರೆ 'ನಾನು ಮ್ಯಾಡಂ ಅವರ ಮ್ಯಾನೇಜರ್' ಎಂದೇ ಮಾತನಾಡುತ್ತಾಳೆ. ಬಣ್ಣದ ಲೋಕದಲ್ಲಿ ಇದೆಲ್ಲಾ ಸಾಮಾನ್ಯ. ಕನಿಷ್ಠ ಅರ್ಧಇಂಚು ಮೆತ್ತಿರುವ ಮೇಕಪ್‌ನ ಹಿಂದಿರುವ ಮುಖದ ನೈಜಭಾವ ಜಗತ್ತಿಗೆ ಕಾಣುವುದೇ ಇಲ್ಲ. ಅವಳ ನೆನಪು ಹಿಂದಕ್ಕೆ ಸರಿಯಿತು.

ಆಗ ಅವಳು ಕನ್ನಡ ಚಿತ್ರ ಜಗತ್ತಿನ ಪ್ರಸಿದ್ಧ ನಟಿ. ಅವಳ ಕಾಲ್‌ಶೀಟ್‌ಗಾಗಿ ಮೈಲುದ್ದದ ಕ್ಯೂ ಇತ್ತು. ಹಗಲು ರಾತ್ರಿ ಎನ್ನದೇ ಪುರಸೊತ್ತಿಲ್ಲದ ದುಡಿತ. ಕೈಗೊಬ್ಬ, ಕಾಲಿಗೊಬ್ಬ ಸಹಾಯಕ. ರಾಮನ ಲೆಕ್ಕ, ಕೃಷ್ಣನ ಲೆಕ್ಕ ನೋಡಿಕೊಳ್ಳಲು ಚಾರ್ಟರ್ಡ್ ಅಕೌಂಟೆಂಟ್‌ಗಳದ್ದೇ ಒಂದು ತಂಡ. ಎಲ್ಲೆಡೆ , ಹಣದ ಹೊಳೆ. ಅಂತಹ ಸುಂದರ ಬದುಕಿಗೆ ತಾನೇ ಕೊಳ್ಳಿ ಇಟ್ಟು ಕೊಂಡು ಬಿಟ್ಟಳು.

ಅವಳಿಗೆ ಕುಡಿಯಬೇಕೆನಿಸಿತು. ಪ್ರಸಿದ್ಧಿಯ ಉತ್ತುಂಗದಲ್ಲಿ ದಿನಕ್ಕೆ ಹನ್ನೆರಡರಿಂದ ಹದಿನಾರು ಗಂಟೆ ದುಡಿದರೂ ಅವಳು ಕುಡಿಯುತ್ತಿರಲಿಲ್ಲ. ಈಗ ಕೆಲಸವಿಲ್ಲ. ಮಹಾ ವಂಚನೆಗೆ ಒಳಗಾಗಿ ಗೆದ್ದಲು ಹತ್ತಿದ ಮರದ ಹಾಗೆ ಒಳಗೇ ಸವೆಯುತ್ತಿದ್ದಾಳೆ.

ಅವಳು ಎದ್ದು ಕಪಾಟಿನಲ್ಲಿ ಇಟ್ಟಿದ್ದ ವಿಸ್ಕಿ ಬಾಟಲ್ ಹೊರ ತೆಗೆದಳು.

★★★

ಸಂಜೆ ಐದು ಗಂಟೆಯಿಂದ ಐದೂವರೆಯೊಳಗೆ ಸತ್ಯೇಂದ್ರನ ಜೊತೆ ವಜ್ರದ ವ್ಯವಹಾರ ಮುಗಿಯಿತು. ಸುಮಾರು ಹದಿನೈದು ಕೋಟಿ ಮೌಲ್ಯದ ವಜ್ರ. ದುಬೈನಿಂದ ಅದನ್ನು ಸುಂಕದವರ ಕಣ್ಣು ತಪ್ಪಿಸಿ ಮುಂಬೈಗೆ, ನಂತರ ಬೆಂಗಳೂರಿಗೆ ಸಾಗಾಣಿಕೆ ಮಾಡುವ ಜವಾಬ್ದಾರಿ ನನ್ನದು. ಮೂರು ಕೋಟಿ ರೂಪಾಯಿ ನನ್ನ ಸೇವಾ ಶುಲ್ಕ. ನನಗೆ ಅನೇಕ ಕಸ್ಟಮ್ಸ್ ಅಧಿಕಾರಿಗಳು ಪರಿಚಯವಿದ್ದರು. ವಜ್ರಗಳನ್ನು ಹಡಗಿನಲ್ಲಿ ತರಬೇಕೋ. ವಿಮಾನದಲ್ಲಿ ತರಬೇಕೋ ಎಂದು ಸಮಯ ಸಂದರ್ಭ ನೋಡಿ ತೀರ್ಮಾನಿಸಬೇಕಾಗಿತ್ತು. ಇನ್ನೊಮ್ಮೆ ಅಂದು ಕೊಂಡೆ. ಇದು ಕಡೆಯ ವ್ಯವಹಾರ. ಇದುವರೆಗೂ ಆದ ಧಾವಂತದ ಬದುಕು ಸಾಕು. ಇನ್ನಾದರೂ ನೆಮ್ಮದಿಯ ಬದುಕಿಗೆ ಕಾಲಿಡಬೇಕು. ನನಗೇನು ಹೆಂಡತಿಯೆ, ಮಕ್ಕಳೆ? ನಾನು ಬೆಂಗಳೂರಿನಲ್ಲಿ ಭೂಗತ ಜಗತ್ತಿನ ಅಘೋಷಿತ ದೊರೆಯಾಗಿದ್ದರೂ, ನನ್ನದೇ ಅಂತ ಒಂದು ಸಂಸಾರ, ನನ್ನ ಕಷ್ಟ ಸುಖ ಹಂಚಿಕೊಳ್ಳುವ ಹೆಂಡತಿ ಮಕ್ಕಳು ಇಲ್ಲವಲ್ಲ? ದೇವರು ಇದ್ದಾನೋ ಇಲ್ಲವೋ ಗೊತ್ತಿಲ್ಲ, ಇದ್ದರೂ, ಅವನು ನನ್ನ ಹಣೆಬರಹವನ್ನು ಬರೆದದ್ದು ಹೀಗೆ.

ಬೇಡ ಬೇಡವೆಂದರೂ, ಹಳೆಯದೆಲ್ಲ ನೆನಪಾಯಿತು. ತನಗೆ ಏಳು ವರ್ಷವಿದ್ದಾಗಲೇ ಅಮ್ಮ ಸತ್ತಿದ್ದಳು. ಅಪ್ಪ ಯಾರದೋ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಅಮ್ಮ ಹೋದ ಕೂಡಲೇ ನನ್ನ ಬಾಲ್ಯದ ಇಡೀ ಗೋಪುರ ಕಳಚಿ ಬಿತ್ತು. ಬೆಳಿಗ್ಗೆ ಎಬ್ಬಿಸಿ, ಮುಖ ತೊಳೆಸಿ, ಓರಣವಾಗಿ ತಲೆಬಾಚಿ, ಎಂಥದೋ ಘಮ ಘಮ ಪೌಡರ್ ಹಾಕಿ, ಬಿಸಿ ಬಿಸಿ ತಿಂಡಿ ಕೊಟ್ಟು, ಯೂನಿಫಾರಂ ಹಾಕಿ